**ಕವಿತೆ**



**ಪಿ. ನಂದಕುಮಾರ್**

ಕಲೆ: ರೂಪಶ್ರೀ ಕಲ್ಲಿಗನೂರು

# ನಗುವ ಕನಸ ಬೊಗಸೆಯಲ್ಲಿ

ಇರುಳು ಕಂಡ ಬೆಳಕಿನಲ್ಲಿ
ಕನಸು ಮನಸು ಕೂಡುವಲ್ಲಿ
ನಗುವ ಕನಸ ಬೊಗಸೆಯಲ್ಲಿ
ನನ್ನ ಕವನ ಹುಟ್ಟುವುದು

ನಭದ ಬಯಲ ರೆಕ್ಕೆಯಲ್ಲಿ
ಹೂವ ಕಣ್ಣ ಕಂಪಿನಲ್ಲಿ
ನೀರು ತುಂಬಿ ನಿಂತ ಕಣ್ಣಿನಲ್ಲಿ
ನನ್ನ ಕವನ ಹುಟ್ಟುವುದು

ಹರಿವ ನದಿಯ ನೀರಿನಲ್ಲಿ
ಗದ್ದೆ ಸಾಲ ಬಯಲಿನಲ್ಲಿ
ತೆನೆ ತೆನೆಯು ತೂಗುವಲ್ಲಿ
ನನ್ನ ಕವನ ಹುಟ್ಟುವುದು

ತುಟಿಯಂಚಿನ ಮಾತಿನಲ್ಲಿ
ಕಾಡ ಹಾದಿ ದಾರಿಯಲ್ಲಿ
ಒಂಟಿ ಹೆಜ್ಜೆ ಗೆಜ್ಜೆಯಲ್ಲಿ
ನನ್ನ ಕವನ ಹುಟ್ಟುವುದು

ಜಗದ ನೋವನಲಿವಿನಲ್ಲಿ
ಮಾತು ಮಾತು ಕಟ್ಟುವಲ್ಲಿ
ಹಗಲ ಕಣ್ಣ ಬೊಗಸೆಯಲ್ಲಿ
ನನ್ನ ಕವನ ಹುಟ್ಟುವುದು

ಬಯಲು ಬಯಲು ಹಾಸುವಲ್ಲಿ
ಹಾಸಿದ ಕಣ್ಣ ಮೂಲೆಯಲ್ಲಿ
ಎದೆ ಬಿರಿದ ಆಸೆಯಲ್ಲಿ
ನನ್ನ ಕವನ ಹುಟ್ಟುವುದು

ಹೆಜ್ಜೆ ಹೆಜ್ಜೆಯ ನಡಿಗೆಯಲ್ಲಿ
ಅದರ ಹಿಂದಿನ ಶಬ್ದದಲ್ಲಿ
ಶಬ್ದ ಹರಡಿದ ಸೂತಕದಲ್ಲಿ
ನನ್ನ ಕವನ ಹುಟ್ಟುವುದು

ಕೊಳಲು ಚೆಲ್ಲಿದ ರಾಗದಲ್ಲಿ
ರಾಗ ಬೆಸೆದ ಹಾಡಿನಲ್ಲಿ
ಹಾಡು ಎಸೆದ ನೆರಳಿನಲ್ಲಿ
ನನ್ನ ಕವನ ಹುಟ್ಟುವುದು

ಕೈಯ ಕೈಯ ಕುಣಿಯುವಲ್ಲಿ
ಪಾದ ಮುರಿದ ಚಿತ್ರದಲ್ಲಿ
ನಿನ್ನ ಕೊನೆಯ ಮಾತಿನಲ್ಲಿ
ನನ್ನ ಕವನ ಹುಟ್ಟುವುದು

